# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ | ಬೆಂಗಳೂರು, ಬುಧವಾರ, ೨೪, ಡಿಸೆಂಬರ್, ೨೦೨೫ (ಪುಷ್ಯ, ೦೩, ಶಕವರ್ಷ, ೧೯೪೭) | ನಂ. ೮೩೦ |
|---|---|---|
| Part – IVA | BENGALURU, WEDNESDAY, 24, DECEMBER, 2025 (PUSHYA , 03, SHAKAVARSHA, 1947) | No.830 |


**<u>ಕರ್ನಾಟಕ ಸರ್ಕಾರ</u>**

ಸಂಖ್ಯೆ:ಸಿಆಸುಇ 103 ಆಸೇವ 2025

ಕರ್ನಾಟಕ ಸರ್ಕಾರದ ಸಚಿವಾಲಯ
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 23.12.2025

## <u>ಅಧಿಸೂಚನೆ</u>

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (ಕರ್ನಾಟಕ ಅಧಿನಿಯಮ ಸಂಖ್ಯೆ:1990ರ 14) ರ 3ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಮೂಲಕ ಅಗತ್ಯ ಪಡಿಸಲಾದಂತೆ, ಸದರಿ ಅಧಿನಿಯಮದ 3ನೇ ಪ್ರಕರಣದ (1)ನೇ ಉಪ ಪ್ರಕರಣದೊಂದಿಗೆ ಓದಲಾದ 8ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಆಡಳಿತ ಸೇವೆಗಳ (ನೇಮಕಾತಿ) ನಿಯಮಗಳು, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಈ ಕೆಳಕಂಡ ನಿಯಮಗಳ ಕರಡನ್ನು ರಾಜ್ಯ ಸರ್ಕಾರವು ಈ ಸಂಬಂಧ ಬಾಧಿತರಾಗ ಬಹುದಾದ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಮತ್ತು ಸದರಿ ಕರಡು ನಿಯಮಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂಬ ಸೂಚನೆಯೊಂದಿಗೆ ಈ ಮೂಲಕ ಪ್ರಕಟಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದಕ್ಕೆ ಮೊದಲು ಸದರಿ ಕರಡು ನಿಯಮಗಳಿಗೆ ಸಂಬಂಧಿಸಿದಂತೆ ಯಾವೊಬ್ಬ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು, ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು-560 001 ಇವರಿಗೆ ಕಳುಹಿಸಬಹುದು.

## ಕರಡು ನಿಯಮಗಳು

1. **ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಇವು, ಸರ್ಕಾರಿ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಅನುಸೂಚಿಯ ತಿದ್ದುಪಡಿ**.- ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) ನಿಯಮಗಳು, 1957ರ ಅನುಸೂಚಿಯಲ್ಲಿ, (1) (3)ನೇ ಕಾಲಂನಲ್ಲಿ (ಎ3) ಕ್ರಮ ಸಂಖ್ಯೆಯಲ್ಲಿನ 'ಕೆಎಎಸ್ (ಆಯ್ಕೆ ಶ್ರೇಣಿ)' ಹುದ್ದೆಯ ಪ್ರವರ್ಗದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2025ರ ಪ್ರಾರಂಭದ ದಿನಾಂಕದಿಂದ ಒಂದು ಬಾರಿಯ ಮುಂಬಡ್ತಿ ಪ್ರಕ್ರಿಯೆಗೆ ಕೆಎಎಸ್ (ಕಿರಿಯ ಶ್ರೇಣಿ ಮತ್ತು ಹಿರಿಯ ಶ್ರೇಣಿ) ವೃಂದದಲ್ಲಿ ಎಂಟು ವರ್ಷಗಳಿಗೆ ಕಡಿಮೆಯಲ್ಲದ ಒಟ್ಟು ಸೇವೆಯನ್ನು ಹೊಂದಿರತಕ್ಕದ್ದು, ಅದರಲ್ಲಿ ಕೆಎಎಸ್ (ಹಿರಿಯ ಶ್ರೇಣಿ) ವೃಂದದಲ್ಲಿ ಎರಡು ವರ್ಷಕ್ಕೆ ಕಡಿಮೆಯಲ್ಲದ ಸೇವೆಯಿರತಕ್ಕದ್ದು."

**ಸೂಚನೆ:**- ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2025ರ ಪ್ರಾರಂಭದ ದಿನಾಂಕದಿಂದ ಒಂದು ಬಾರಿಯ ಮುಂಬಡ್ತಿ ಕ್ರಮವು ಪೂರ್ಣಗೊಂಡ ಮೇಲೆ, (2)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಯ ಮುಂಬಡ್ತಿಗೆ ಕರ್ನಾಟಕ ರಾಜ್ಯ ಆಡಳಿತ ಸೇವೆಗಳ (ನೇಮಕಾತಿ) (ತಿದ್ದುಪಡಿ) ನಿಯಮಗಳು, 2025ರ ಉಪಬಂಧಗಳ ಕಾರ್ಯಾಚರಣೆಯು ನಿಂತುಹೋಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ನಾಗಪ್ಪ ಎಸ್. ಪರೀಟ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ),
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ, (ಸೇವೆಗಳು-2)
☎: 080-2203 3207

**GOVERNMENT OF KARNATAKA**

No: DPAR 103 SKT 2025

Karnataka Government Secretariat,
Dr. B.R. Ambedkar Veedhi,
Vidhana Soudha,
Bengaluru, Dated:23.12.2025

**NOTIFICATION**

The draft of the following rules further to amend the Karnataka Administrative Services (Recruitment) Rules, 1957, which the Government of Karnataka proposes to make in exercise of the powers conferred by sub- section (1) of section 3 read with section 8 of the Karnataka State Civil Services Act, 1978 (Karnataka Act 14 of 1990) is hereby published as required by clause (a) of sub-section (2) of section 3 of the said Act, for the information of all the persons likely to be affected thereby and notice is hereby given that the said draft will be taken into consideration after fifteen days from the date of its publication in the Official Gazette.

Any objection or suggestion which may be received by the State Government from any person with respect to the said draft before the expiry of the period specified above will be considered by the State Government. Objections or suggestions may be addressed to the Secretary to Government, Department of Personnel and Administrative Reforms, Vidhana Soudha, Bengaluru-560 001.

**DRAFT RULES**

**1. Title and Commencement: (1**) These rules may be called the Karnataka State Administrative Services (Recruitment) (Amendment) Rules, 2025.

(2) They shall come into force from the date of their final publication in the Official Gazette.

**2. Amendment of the Schedule.-** In the Karnataka State Administrative Services (Recruitment) Rules, 1957, in the Schedule, in the category of post of 'KAS (Selection Grade)', at serial number (a3), in column (4), the following shall be inserted at the end, namely:-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



"Provided that, as one time measure from the date of commencement of the Karnataka State Administrative Services (Recruitment) (Amendment) Rules, 2025 must have put in a total service of not less than eight years in the cadre KAS (Senior Scale) and KAS Group-A (Junior Scale) of which not less than two years shall be in the cadre of KAS (Senior Scale)".

**Note:-** On completion of the one time process from the date of commencement of the Karnataka State Administrative Services (Recruitment) (Amendment) Rules, 2025 for promotion to the post specified in the column (2), the provisions of the Karnataka State Administrative Services (Recruitment) (Amendment) Rules, 2025 shall cease to operate.

By Order and in the name of the
Governor of Karnataka

(NAGAPPA S PAREET)
Under Secretary to Government (I/c)
Department of Personnel and
Administrative Reforms (Services-2)
☎: 080-2203 3207

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH